<u>ಸಾಕ್ಷಿಯನ್ನು ದಿನಾಂಕಃ **14-08-2025** ರಂದು ಕರೆಯಿಸಿ ಪ್ರಮಾಣ ವಚನ ನೀಡಲಾಯಿತು.</u>

<u>ಪಾಟೀಸವಾಲುಃ ವಾದಿ ಪರ ವಕೀಲರವರಿಂದಃ</u>

1. ಜಮೀನುಗಳಿಗೆ ಸರ್ವೆ ನಂಬರು ಇರುತ್ತದೆ ಮತ್ತು ಮನೆಗಳಿಗೆ ಡೋರು ನಂಬರು ಇರುತ್ತದೆ ಅಂದರೆ ಸರಿ. ನಾನು ದಾವಾ ಅಸ್ತಿಯ ಪಹಣಿ ಮೈಸೂರು ಡಿವಿಶನ್ ಸೆಟಲ್ ಮೆಂಟ್ ರಿವಿಷನ್ ಮತ್ತು ಇತರೆ ಕಂದಾಯ ದಾಖಲೆಗಳನ್ನು ನಾನು ನೋಡಿರುವುದಿಲ್ಲ. ದಾವಾ ಅಸ್ತಿಯ ಸರ್ವೆ ನಂ 251 ವಿಸ್ತಿರ್ಣ 23 ಸೆನ್ಸ ಇದ್ದು ಅದು ವಾದಿಯರಿಗೆ ಸೇರಿರುವುದು ಅಂದರೆ ನನಗೆ ಗೊತ್ತಿಲ್ಲ. ದಾವಾ ಅಸ್ತಿ ಮತ್ತು ನನ್ನ ಖರೀದಿ ಪತ್ರದಲ್ಲಿ ಕಾಣಸಿರುವ ಅಸ್ತಿ ಇವೆರೆಡೂ ಬೇರೆ ಬೇರೆ ಆಗಿವೆ ಅಂದರೆ ಸರಿಯಲ್ಲ. ನನ್ನ ಖರೀದಿ ಪತ್ರದಲ್ಲಿ ಸರ್ವೆ ನಂಬರು ವಿಸ್ತಿರ್ಣ ಕಂಡು ಬರುವುದಿಲ್ಲ ಅಂದರೆ ಸರಿ.

2. ದಾವಾ ಅಸ್ತಿಯ RTC ಮತ್ತು ಇತರೆ ಕಂದಾಯ ದಾಖಲೆಗಳಲ್ಲಿ ಅದರ ಸರ್ವೆ ನಂ 251 ಎಂದು ಇದ್ದು ವಿಸ್ತಿರ್ಣ 23 ಸೆನ್ಸ ಎಂದು 1928-2025 ರ ವರಿಗಿನ ದಾಖಲೆಗಳಲ್ಲಿ ಕಂಡು ಬರುತ್ತದೆ ಅಂದರೆ ಸರಿಯಲ್ಲ. ನನಗೆ ದಾವಾ ಅಸ್ತಿಯ ಮೇಲೆ ಯಾವುದೇ ಹಕ್ಕು ಅಧಿಕಾರ ಸ್ವಾಧೀನ ಇಲ್ಲ ಅಂದರೆ ಸರಿಯಲ್ಲ. ನಾನು 2024-25 ರ ದಾವಾ ಅಸ್ತಿಯ ಪಹಣಿ ಪತ್ರಿಕೆಯನ್ನು ನೋಡಿರುವುದಿಲ್ಲ. ಈಗಲೂ ಪಹಣಿ ಪತ್ರಿಕೆಯಲ್ಲಿ ವಾದಿಯರ ಜಂಟಿ ಹೆಸರು ನಮೂದು ಇದೆ ಅಂದರೆ ನನಗೆ ಗೊತ್ತಿಲ್ಲ.

3. 1928 ರಿಂದ ಇಲ್ಲಿಯವರೆಗೆ ದಾವಾ ಅಸ್ತಿ ಪೊಡಿ ಅಗಿರುವುದಿಲ್ಲ ಮತ್ತು ಭೂ ಪರಿವರ್ತನೆ ಆಗಿರುವುದಿಲ್ಲ ಅಂದರೆ ನನಗೆ ಗೊತ್ತಿಲ್ಲ. ದಾವಾ ಅಸ್ತಿ ಎಂದೂ ಕೂಡ ತೆಲಿಗೆ ಗ್ರಾಮ ಪಂಚಾಯತಿಯಿಂದ ಅಸೆಸ್ಮೆಂಟಿಗೆ ಒಳಪಟ್ಟಿಲ್ಲ ಅಂದರೆ ಸರಿಯಲ್ಲ. ದಾವಾ ಅಸ್ತಿಯು ಅಸೆಸ್ಮಂಟ ಒಳಪಟ್ಟದೆ ಎಂದು ತೋರಿಲು ನಾನು ಕಂದಾಯ ರಶಿಧಿ ಖಾತಾ ಎಕ್ಷಟ್ರಾಕಟ್ ಮತ್ತು ನೊಂದಣಿ ಪತ್ರವನ್ನು ಮತ್ತು ಇಸಿಯನ್ನು ನ್ಯಾಯಾಲಯಕ್ಕೆ ಹಾಜರುಪಡಿದ್ದೇನೆ. ನಾನು ಮೇಲೆ ಹೇಳಿದ ದಾಖಲೆಗಳಲ್ಲಿ ದಾವಾ ಅಸ್ತಿಯ ಸರ್ವೆ ನಂಬರು ವಿಸ್ತಿರ್ಣ ಕಂಡು ಬರುವುದಿಲ್ಲ ಅಂದರೆ ನನಗೆ ಗೊತ್ತಿಲ್ಲ.

4. ನಾನು ಮೇಲೆ ಹೆಳಿದ ದಾಖಲೆಗಳು 04.06.1975 ರಿಂದ ನನ್ನ ಗಮನದಲ್ಲಿರುತ್ತವೆ. ಅದರಲ್ಲಿ ದಾವಾ ಅಸ್ತಿಯ ಸರ್ವೆ ನಂಬರು ಉಲ್ಲೆಕ ಇಲ್ಲ ಎಂದು ನಾನು ತಿಳಿದುಕೊಂಡಿರುತ್ತೇನೆ. ದಾವಾ ಅಸ್ತಿ ಮತ್ತು ನನ್ನ ದಾಖಲೆಗಳಲ್ಲ ಕಂಡು ಬರುವ ಅಸ್ತಿ ಎರಡೂ ಬೇರೆ ಬೇರೆ ಅಂದರೆ ಸರಿಯಲ್ಲ. ನಾನು ಹಾಜರು ಪಡಿಸಿರುವ ದಾಖಲೆಗಳು

**ಸಾಕ್ಷಿಯ ಸಹಿ** 14.08.2025

ದಾವಾ ಅಸ್ತಿಗೆ ಸಂಬಂದಿಸಿರುವುದಿಲ್ಲ ಅಂದರೆ ಸರಿಯಲ್ಲ. ಸದರಿ ದಾಖಲೆಗಳನ್ನು ಸೃಷ್ಟಿಸಿ ಹಾಜರು ಪಡಿಸಿರುವೆನು ಅಂದರೆ ಸರಿಯಲ್ಲ.

5. 1928 ರಿಂದ ಪೂರ್ವಜರ ಕಾಲದಿಂದಲೂ ದಾವಾ ಅಸ್ತಿಯ ವಾದಿಯರ ಹಾಗೂ ಅವರ ಪೂರ್ವಜರ ಸ್ವಾಧೀನದಲ್ಲರುವುದು ಅಂದರೆ ಸರಿಯಲ್ಲ. ನಾನು ಯಾವತ್ತೂ ಮತ್ತು ಈಗಲೂ ದಾವಾ ಅಸ್ತಿಯ ಮೇಲೆ ಯಾವುದೇ ಹಕ್ಕು ಅಧಿಕಾರ ಹೊಂದಿರಲಿಲ್ಲ ಮತ್ತು ಈಗಲೂ ಹೊಂದಿರುವುದಿಲ್ಲ ಅಂದರೆ ಸರಿಯಲ್ಲ. ನನಗೆ ದಾವಾ ಅಸ್ತಿಯ ಮೇಲೆ ಯಾುವುದೇ ಹಕ್ಕು ಅಧಿಕಾರ ಇಲ್ಲದೇ ಇದ್ದರೂ ಸಹಿತ ನಾನು ಪದೇ ಪದೇ ದಾವಾ ಅಸ್ತಿಗೆ ಅಕ್ರಮ ಪ್ರವೇಶ ಮಾಡಿ ವಾದಿಯರ ಹಕ್ಕು ಸ್ವಾಧೀನ ಅನುಭವಕ್ಕೆ ದಕ್ಕೆ ಮಾಡುತ್ತಿದ್ದೇನೆ ಅಂದರೆ ಸರಿಯಲ್ಲ. ಆ ಬಗ್ಗೆ ತೆಲಿಗೆ ಗ್ರಾಮ ಪಂಚಾಯತಿ ವ್ಯಾಪ್ತಿಯಲ್ಲಿ ಹಲವಾರು ಬಾರಿ ಪಂಚಾಯತಿ ನಡೆದಿದ್ದು ನನಗೆ ಹಿರಿಯರು ಬುದ್ದಿ ಮಾತು ಹೇಳಿರುವರು ಅಂದರೆ ಸರಿಯಲ್ಲ.

6. ನಿಡಿ 15 ರಂತೆ ಅಹ್ಮದ ಉಲ್ಲಾ ಖಾನ್ ಇವರಿಂದ ನಾವು ಅಂದರೆ ಸುನ್ನಿ ಜಾಮೀಯ ಮಸೀದಿಯವರು ಖರೀದಿ ಮಾಡಿದ್ದೇವೆ. ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ.

( ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸರಿಯಿದೆ.

14-08-2025

ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ. ಹರಪನಹಳ್ಳಿ

**ಸಾಕ್ಷಿಯ ಸಹಿ** 14.08.2025